ದೀವಟಿಗೆ

ವಾರಪತ್ರಿಕೆ, ಸಂಪಾದಕ: ಸರಿಮನೆ ನಾಗರಾಜ್.

ಶುಭಾಶಯ!

ಜನಜೀವನದಲ್ಲಿ ದಿನದಿನವೂ ವಿಷ ನಿರುತ್ಸಾಹದಲ್ಲಿ ಪ್ರತಿವರ್ಷವೂ ತಪ್ಪದೇ ಬರುವ ಯುಗಾದಿಯು ಜನರಿಗೆ ಹಬ್ಬದ ದಿನವಾದರೂ ಅಷ್ಟಿಷ್ಟು ಸಂತೋಷ, ಸಿಹಿ ತರಲಿ ಎಂಬ 'ದೀವಟಿಗೆ'ಯ ಹಾರೈಕೆ!

ಶಾಲಾ ಬಾಲಕಿಯರ ಹಣ, ಆಭರಣ ಕಸಿಯಲು ಯತ್ನ

ಊರವರ ನೆರವಿನಿಂದ ಅಪರಾಧಿಗಳ ಸೆರೆ

ಕಮ್ಮರಡಿ: ಶಾಲೆಯಿಂದ ಹಿಂದಿರುಗುತ್ತಿದ್ದ ಹೆಣ್ಣುಮಕ್ಕಳನ್ನು ಅಡ್ಡಗಟ್ಟಿ, ಆಭರಣ ಕಸಿಯಲು ಯತ್ನಿಸಿದ ಇಬ್ಬರನ್ನು ಗ್ರಾಮಸ್ಥರ ಸಕಾಲಿಕ ಪ್ರಯತ್ನದಿಂದಾಗಿ ಪೋಲೀಸರು ಬಂಧಿಸಿದ ಘಟನೆ ನಡೆದಿದೆ.

ಮಾನಿನಕಟ್ಟೆ ಬಳಿ ಹಳ್ಳಿಯ ದಾರಿಯಲ್ಲಿ ಶಾಲೆಯಿಂದ ಮರಳುತ್ತಿದ್ದ ಇಬ್ಬರು ಹುಡುಗಿಯರನ್ನು ಶೃಂಗೇರಿಯವರೆಂದು ಹೇಳಲಾದ ಇಬ್ಬರು ಅಡ್ಡಗಟ್ಟಿದರು. ಅವರ ಹಣ, ವಾಚು, ಆಭರಣಗಳನ್ನು ಕಿತ್ತುಕೊಂಡರು. ಆ ಹುಡುಗಿಯರು ಸಹಾಯಕ್ಕಾಗಿ ಕೂಗಿಕೊಂಡಿದ್ದನ್ನು ಕೇಳಿದ ಹಳ್ಳಿಗರು ಓಡಿ ಬಂದುದನ್ನು ಕಂಡ ಕಳ್ಳರು, ತಾವು ತಂದಿದ್ದ ಸೈಕಲ್‌ಗಳನ್ನು ಅಲ್ಲೇ ಬಿಟ್ಟು ಕಾಡಿನಲ್ಲಿ ಪರಾರಿಯಾದರು.

ಸೈಕಲ್‌ಗಳು ಶೃಂಗೇರಿಯಿಂದ ಬಾಡಿಗೆಗೆ ತಂದವುಗಳೆಂದು ಪತ್ತೆ ಮಾಡಿದ ಹಳ್ಳಿಗರು ತಕ್ಷಣವೇ ಅವುಗಳನ್ನೊಯ್ದು, ಟೆಲಿಫೋನ್ ಉಳ್ಳವರೊಬ್ಬರ ಮನೆಯಲ್ಲಿಟ್ಟು ಅಲ್ಲಿಂದ ಶೃಂಗೇರಿ ಪೋಲೀಸರಿಗೆ ಫೋನ್ ಮಾಡಿದರು. ಅವರು ಕೊಪ್ಪ ಪೋಲೀಸರನ್ನು ಸಂಪರ್ಕಿಸಿ, ಎರಡು ಕಡೆಯಿಂದಲೂ ಪೋಲೀಸರು ಧಾವಿಸಿದರು.

ಗ್ರಾಮಸ್ಥರ ನೆರವಿನೊಡನೆ ಕಳ್ಳರಿಗಾಗಿ ಹುಡುಕಾಟ ನಡೆಯಿತು. ಹಳ್ಳಿ ಮನೆಯೊಂದರಲ್ಲಿ ಆಶ್ರಯ ಪಡೆದು ಮಲಗಿದ್ದ ಅವರನ್ನು ಪತ್ತೆ ಹಚ್ಚಿ ಬಂಧಿಸಲಾಯಿತು.

ಕೊಪ್ಪ ಪೋಲೀಸರು ಮೊಕದ್ದಮೆ ಹೂಡಿ, ಆರೋಪಿಗಳನ್ನು ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಿರುವುದಾಗಿ ತಿಳಿದು ಬಂದಿದೆ.

ಆರೋಪಿಗಳಲ್ಲೊಬ್ಬ ಶೃಂಗೇರಿಯ ಹೋಟೆಲೊಂದರಲ್ಲಿ ಕೆಲಸ ಮಾಡುತ್ತಿದ್ದವ ಎನ್ನಲಾಗಿದೆ.

ಈ ಕೆಟ್ಟ ಪ್ರವೃತ್ತಿ ಹಬ್ಬಲು ಅವಕಾಶ ಕೊಡಬಾರದು

ಮೊದಲೇ ನಮ್ಮಲ್ಲಿ ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸುವುದೆಂದರೆ ಎಲ್ಲರಿಗೂ ಅಸಡ್ಡೆ. ಇರುವ ಸೌಲಭ್ಯಗಳೋ– ಅನುಭವಿಸಿದವರಿಗೇ ಗೊತ್ತು. ಅದರ ಮೇಲೆ, ಹಾಡೇ ಹಗಲು ಇಂಥ 'ಸಾಹಸ'ಕ್ಕೆ ಪುಂಡರು ಇಳಿಯುವಂತಾದರೆ ಹಳ್ಳಿಯ ಹೆಣ್ಣು ಮಕ್ಕಳು ಶಾಲೆ ಕಾಲೇಜುಗಳಿಗೆ ಹೋಗುವುದೇ ಅಸಾಧ್ಯವಾಗುತ್ತದೆ. ಆದ್ದರಿಂದ, ಈ ಪ್ರವೃತ್ತಿ ಹಬ್ಬದಂತೆ ತೀವ್ರಕ್ರಮ ಅಗತ್ಯ. ಅಪರಾಧಿಗಳಿಗೆ ಸರಿಯಾಗಿ 'ಬುದ್ಧಿ ಕಲಿಸು'ವುದಲ್ಲದೆ, ಸಮಯ ಪ್ರಜ್ಞೆಯಿಂದ ಸೆಣಸಿ, ಅಪರಾಧಿಗಳ ಬಂಧನಕ್ಕೆ ಕಾರಣರಾದ ಹಳ್ಳಿಗರಿಗೆ ಸೂಕ್ತ ಪ್ರೋತ್ಸಾಹಕರ ಬಹುಮಾನ ಕೊಡುವ ಬಗ್ಗೆ ಪೋಲೀಸರು ಯೋಚಿಸುವುದು ಯೋಗ್ಯ.

ಮಾ. ೫ ರಂದು ಶೃಂಗೇರಿಗೆ ಮುಖ್ಯಮಂತ್ರಿ ಭೇಟಿ

ಶೃಂಗೇರಿ: ಮುಖ್ಯಮಂತ್ರಿ ಗುಂಡೂರಾವ್ ಅವರು ಏಪ್ರಿಲ್ ೫ ಮತ್ತು ೬ ರಂದು ಶೃಂಗೇರಿ, ಕಿಗ್ಗಗಳಿಗೆ ಭೇಟಿ ಕೊಟ್ಟು, ಕಿಗ್ಗ ದೇವಸ್ಥಾನದ ರುದ್ರ ಹೋಮದಲ್ಲಿ ಪಾಲ್ಗೊಳ್ಳುವರೆಂದು ತಿಳಿದು ಬಂದಿದೆ.

ಮುಖ್ಯರಸ್ತೆಯ ಅಂಚಿಗೆ ದೂಡಲ್ಪಟ್ಟಿರುವ ಕಿಗ್ಗ ದೇವಾಲಯದ ನೌಕರರ ಬಹಳ ಕಾಲದ ಬೇಡಿಕೆಗಳು ಈ ಸಂದರ್ಭದಲ್ಲಾದರೂ ಈಡೇರಬಹುದೆಂಬ ಆಸೆಗೆ ಈಗ ರೆಕ್ಕೆ ಪುಕ್ಕ ಬಂದಂತಾಗಿದೆ.

ಅನುದಾನ ಮಂಜೂರಾತಿಗೆ ಮನವಿ

ಇದೇ ಸಂದರ್ಭದಲ್ಲಿ, ಕೊಪ್ಪ ತಾಲೂಕಿನ ದೇವಸ್ಥಾನಗಳಿಗೆ ಬರಬೇಕಾಗಿರುವ ಅನುದಾನವನ್ನು ಶೀಘ್ರವೇ ಬಿಡುಗಡೆ ಮಾಡುವಂತೆ ಮತ್ತು ದೇವಸ್ಥಾನಗಳ ಅಭಿವೃದ್ಧಿಗೆ ಆರ್ಥಿಕ ಸಹಾಯ ನೀಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಸಲ್ಲಿಸಲು "ಕೊಪ್ಪ ತಾ|| ಧಾರ್ಮಿಕ ಸಂಸ್ಥೆಗಳ ಸಂಚಾಲಕರ ಸಮಿತಿ" ತೀರ್ಮಾನಿಸಿರುವುದಾಗಿ ತಿಳಿದು ಬಂದಿದೆ.

ರಾಜಕೀಯ ಮಾತಾಡಿದರು!

ಬೆಳ್ಳಿ ಹಬ್ಬದ ಸಮಾರಂಭದ ಬಗ್ಗೆ ಸಮಾಜದ ಗಣ್ಯ ಸದಸ್ಯೆಯೊಬ್ಬರ ಜೊತೆ ಲೋಕಾಭಿರಾಮವಾಗಿ ಮಾತಾಡುತ್ತ, 'ಸಚಿವೆಯವರು ಮತ್ತೇನು ಹೇಳಿದರು ? ನಿಮ್ಮ ಸಮಾಜದ ಬಗ್ಗೆ ವಿಶೇಷವಾಗಿ ಏನಾದರೂ ಹೇಳಿದರಾ?' ಎಂದು ವಿಚಾರಿಸಿದಾಗ ಅವರು, "ಹೆಚ್ಚೇನೂ ಹೇಳಲಿಲ್ಲ. ಅವರು ಹೆಚ್ಚು ರಾಜಕೀಯವನ್ನೇ ಮಾತಾಡಿದರು!" ಎಂದು ಸ್ವಲ್ಪವೇ ತಗ್ಗಿದ ದನಿಯಲ್ಲಿ ಹೇಳಿದರು.

ರಾಜ್ಯ ಸಾರಿಗೆ ಬಸ್ ಪ್ರಯಾಣ ದರ ಏರಿಕೆ?

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣದ ದರಗಳನ್ನು ಏರಿಸಲು ಉದ್ದೇಶಿಸಲಾಗಿದ್ದು, ಈ ಬಗ್ಗೆ ಸಲಹೆ ಹಾಗೂ ದೂರುಗಳನ್ನು ಸಲ್ಲಿಸಲು ಏ. ೧೫ ರ ವರೆಗೆ ಅವಕಾಶವಿದೆ ಎಂದು ಸಾರಿಗೆ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಈ ಬಗ್ಗೆ ಅಭಿಪ್ರಾಯ ಮಂಡಿಸಲು ಅನುಕೂಲವಾಗುವಂತೆ, ಕಳೆದ ಮೂರು ವರ್ಷಗಳ ಲಾಭ– ನಷ್ಟ ದಾಖಲೆಗಳು, ಆಯವ್ಯಯ ಪತ್ರ ಹಾಗೂ ನಷ್ಟದ ಬಗ್ಗೆ ಸಂಸ್ಥೆಯ ಅಧ್ಯಕ್ಷರ ವಿವರಣೆ–ಇವುಗಳನ್ನು ಒದಗಿಸುವಂತೆ ಬೆಂಗಳೂರು ಜಿಲ್ಲೆ ವರ್ತೂರಿನ ಜಾಗೃತ ಬಳಕೆದಾರರ ವೇದಿಕೆ ಸಂಸ್ಥೆಯನ್ನು ಕೇಳಿದೆ.

ಜಿಲ್ಲಾ ಪತ್ರಕರ್ತರ ಮಾಹಿತಿ ಕೈಪಿಡಿ 'ಜಾಗೃತರು' ಬಿಡುಗಡೆ

ಚಿಕ್ಕಮಗಳೂರು: ಜಿಲ್ಲಾ ಪತ್ರಕರ್ತರ ಸಂಘ ಹೊರತಂದಿರುವ ಜಿಲ್ಲೆಯ ಪತ್ರಕರ್ತರ ಬಗ್ಗೆ ಮಾಹಿತಿ ಒದಗಿಸುವ ಕೈಪಿಡಿ 'ಜಾಗೃತರು' ಬಿಡುಗಡೆ ಮಾ. ೨೮ ರಂದು ಚಿಕ್ಕಮಗಳೂರಲ್ಲಿ ನಡೆಯಲಿದೆ.

ಗೋಕಾಕ್ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ ಧರಣಿ ಸತ್ಯಾಗ್ರಹ

ಮೈಸೂರು: ಕನ್ನಡದ ಕೂಗು ಕೇವಲ ಅರಣ್ಯರೋದನ ಅಲ್ಲದೆ ಸ್ವತಃ ಕನ್ನಡಿಗರೇ ಕನ್ನಡಕ್ಕೆ 'ಕಾಸ್ಮೆಟಿಕ್' ಮಾಡುತ್ತಿರುವ ಈಗಿನ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದಲ್ಲಿ 'ಪ್ರೌಢ ಶಾಲೆಯವರೆಗೆ ಪ್ರಥಮ ಭಾಷೆಯಾಗಿ ಕನ್ನಡ ಕಲಿಕೆ ಕಡ್ಡಾಯವಾಗಬೇಕು' ಎಂಬ ಶಿಫಾರಸಿನಿಂದ ಕನ್ನಡಕ್ಕೆ ಕೊಂಚ ನ್ಯಾಯ ದೊರಕಿಸಲು ಯತ್ನಿಸಿದ ಗೋಕಾಕ್ ವರದಿಯನ್ನು ಬರುವ ಶೈಕ್ಷಣಿಕ ವರ್ಷದಿಂದಲೇ ಅನುಷ್ಠಾನಕ್ಕೆ ತರುವಂತೆ ಒತ್ತಾಯಿಸಿ, ಮೈಸೂರಿನ 'ಕನ್ನಡ ಮಾಧ್ಯಮ ಹೋರಾಟ ಸಮಿತಿ' ಮಾ. ೧೬ ರಿಂದ ಒಂದು ವಾರ ಕಾಲ ಧರಣಿ ಸತ್ಯಾಗ್ರಹ ನಡೆಸುತ್ತಿದೆ. ಹಲವು ಸಂಘ ಸಂಸ್ಥೆಗಳು, ಸಂಘಟನೆಗಳು, ವಿದ್ಯಾರ್ಥಿಗಳು ಇದನ್ನು ಬೆಂಬಲಿಸಿ, ದಿನವೂ ಧರಣಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ವರದಿ ಅನುಷ್ಠಾನಕ್ಕೆ ಬರುವವರೆಗೂ ಹೋರಾಟ ಮುಂದುವರಿಯುವುದೆಂದು ಸಮಿತಿ ಘೋಷಿಸಿದೆ.

ಕೊಪ್ಪ ಮಹಿಳಾ ಸಮಾಜದ ಬೆಳ್ಳಿ ಹಬ್ಬ

ಕೊಪ್ಪ: ಇಲ್ಲಿನ ಮಹಿಳಾ ಸಮಾಜಕ್ಕೆ ೨೫ ವರ್ಷ ತುಂಬಿದ ಸಮಾರಂಭ ಮಾ. ೧೫ ರಂದು ಪಿ. ಜಿ. ಗುಜ್ಜಾರ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ಮಂತ್ರಿ ಬೇಗಾನೆ ರಾಮಯ್ಯನವರು ದೇಶದ ಸಂಸ್ಕೃತಿಯನ್ನು ರಕ್ಷಿಸುವ ಹೊಣೆ ಮಹಿಳೆಯರ ಮೇಲಿದೆ ಎಂದರು.

ಸ್ಮರಣ ಸಂಚಿಕೆ ಬಿಡುಗಡೆ ಮತ್ತು ಬಹುಮಾನ ವಿತರಣೆ ಮಾಡಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಮಂತ್ರಿ ಮನೋರಮಾ ಮಧ್ವರಾಜ್ ಅವರು, ಮಹಿಳಾ ಸಮಾಜಗಳು ಸರ್ಕಾರದ ಸಹಾಯಧನಕ್ಕಾಗಿ ಕಾಯದೇ ತಮ್ಮದೇ ಸ್ವಂತ ಮೂಲಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕೆಂದು ತಿಳಿಸಿದರು. ಈ ದಿಕ್ಕಿನಲ್ಲಿ ಅವರು ಕೊಪ್ಪ ಮಹಿಳಾ ಸಮಾಜದ ಸಾಧನೆಯನ್ನು ಶ್ಲಾಘಿಸಿದರು.

ಸನ್ಮಾನ

ಬೆಳ್ಳಿ ಹಬ್ಬದ ಅಂಗವಾಗಿ ಸಮಾಜದ ಸಂಸ್ಥಾಪಕಿಯರಾದ ಶ್ರೀಮತಿಯರಾದ ಎಂ. ಕೆ. ಪುಟ್ಟಮ್ಮ, ಶಾಂತಾರಾವ್ ಮತ್ತು ಶೀಲಾ ಗುಜ್ಜಾರ್ ಅವರುಗಳನ್ನು ಸನ್ಮಾನಿಸಲಾಯಿತು. ಸನ್ಮಾನಿತರ ಪರವಾಗಿ ಶ್ರೀಮತಿ ಶಾಂತಾರಾವ್ ಮಾತನಾಡಿದರು.

ಶ್ರೀಮತಿ [illegible] ಸ್ವಾಗತಿಸಿದರು, ಶ್ರೀಮತಿ [illegible] ವಂದನಾರ್ಪಣೆ ಮಾಡಿದರು.

ಇಂಗ್ಲಿಷ್ ಶಾಲೆಗೆ ಬೇಡಿಕೆ

ಕೊಪ್ಪದಲ್ಲಿ ಇಂಗ್ಲಿಷ್ ಶಾಲೆ ಇಲ್ಲದೆ, ಇಂಗ್ಲಿಷ್ ಮಾಧ್ಯಮದ ಶಾಲೆಗೆ ಮಕ್ಕಳನ್ನು ಕಳಿಸಲು ಇಚ್ಛಿಸುವವರು [illegible] ಮುಂತಾದ ಊರುಗಳಿಗೆ [illegible] ರಿಂದ ಇಲ್ಲಿಗೆ ಒಂದು ಇಂಗ್ಲಿಷ್ ಮಾಧ್ಯಮ ಶಾಲೆಯನ್ನು ಮಂಜೂರು ಮಾಡುವಂತೆ ಮಹಿಳಾ ಸಮಾಜದ ಪರವಾಗಿ ಮಂತ್ರಿಗಳನ್ನು ಕೇಳಿಕೊಳ್ಳಲಾಯಿತೆಂದು ತಿಳಿದುಬಂದಿದೆ.

ಫ್ಯಾನ್ಸಿ ಫೇರ್

ಸಮಾಜದ ಸದಸ್ಯೆಯರು [illegible] ಕಲಾ ಪ್ರದರ್ಶನ ಮತ್ತು [illegible] ಫ್ಯಾನ್ಸಿ ಫೇರ್ [illegible] ವ್ಯವಸ್ಥೆಗೊಳಿಸಲಾಗಿತ್ತು.

ಗ್ರಾಮೀಣ ಮಹಿಳೆಯರ ಸಂಘಟನೆ: ಒಂದು ವಿವೇಚನೆ

ಹೆಚ್. ಎಸ್. ಎನ್. ರತ್ನ

ಪ್ರತಿ ವರ್ಷ ಮಾರ್ಚ್ ೮ನ್ನು ವಿಶ್ವಾದ್ಯಂತ 'ಮಹಿಳಾ ದಿನ'ವನ್ನಾಗಿ ಈಗ ೭೦ ವರ್ಷಗಳಿಂದ ಆಚರಿಸಲಾಗುತ್ತಿದೆ. ಭಾರತದಲ್ಲೂ ಇದರ ಆಚರಣೆ ಇದೆ. ಆದರೆ, ಮಹಿಳೆಯರಿಗೂ ಹಕ್ಕುಗಳಿವೆ, ಅವರ ಶೋಷಣೆ ನಡೆಯುತ್ತಿದೆ, ಅವರ ವಿಮೋಚನೆ-ಸರ್ವತೋಮುಖ ಬೆಳವಣಿಗೆ ಆಗಬೇಕು ಎಂಬಂಥ ವಿಚಾರಗಳನ್ನೇ ನಮ್ಮಲ್ಲಿ ಎಷ್ಟು ಜನ ಒಪ್ಪುತ್ತಾರೆ? "ಮಹಿಳೆಗೆ ಸ್ವಾತಂತ್ರ್ಯ ಎಂದರೆ ಹಾದರಕ್ಕೆ ಅವಕಾಶ ಕೊಟ್ಟಂತೆ" ಮುಂತಾದ ಅಭಿಪ್ರಾಯಗಳುಳ್ಳ ನಮ್ಮ ಗ್ರಾಮೀಣ ಪ್ರದೇಶದಲ್ಲಿ, ವಿದ್ಯಾಭ್ಯಾಸದ ಮೂಲಕ ಮಹಿಳೆಯರ ಸಂಘಟನೆ ಆಗದೆ ದೇಶದ ಏಳಿಗೆ ಸಾಧ್ಯವಿಲ್ಲ ಎನ್ನುತ್ತಾರೆ ಲೇಖಕಿ.

ಮಹಿಳೆಯರೂ ಮನುಷ್ಯರು; ಮನುಷ್ಯರಿಗೆ ಕೆಲವು ಮೂಲಭೂತ ಸ್ವಾತಂತ್ರ್ಯ ಇರಬೇಕು ಎಂಬುದನ್ನು 'ಗಂಡು ಶ್ರೇಷ್ಠ'ರೂ ಅರ್ಥಮಾಡಿಕೊಳ್ಳುವುದು ಅನಿವಾರ್ಯ.

ಭಾರತ ಹಳ್ಳಿಗಳ ನಾಡು. ಶೇ ೭೦ ಕ್ಕಿಂತಲೂ ಹೆಚ್ಚು ಮಂದಿ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಭಾರತದ ಪ್ರಗತಿ ಹಳ್ಳಿಗಳ ಉದ್ಧಾರದಲ್ಲಿದೆ ಎಂಬ ಮಾತು ನಿಜವಾದರೂ ಮಹಿಳೆಯರ ಪ್ರಗತಿ-ಉದ್ಧಾರದಲ್ಲಿ ಭಾರತದ ಏಳ್ಗೆ ಅಡಗಿದೆ. ಭಾರತದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಅದರಲ್ಲೂ ಗ್ರಾಮೀಣ ಮಹಿಳೆಯರ ಸ್ಥಿತಿಗತಿ ಮತ್ತು ಸಂಘಟನೆಗಳ ಬಗ್ಗೆ ವಿವೇಚನೆ ಮಾಡುವುದು ಈ ಲೇಖನದ ಉದ್ದೇಶ.

ನಾನು ೧೯೮೦-೮೧ ರಲ್ಲಿ ಮೈಸೂರಿನ ನೆಹರು ಯುವಕ ಕೇಂದ್ರದಲ್ಲಿ 'ರಾಷ್ಟ್ರೀಯ ಸ್ವಯಂ ಸೇವಕಿ'ಯಾಗಿ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರಿಗಾಗಿ ವಯಸ್ಕರ ಶಿಕ್ಷಣ ಶಾಲೆಗಳ ಸಂಘಟನೆ ಮತ್ತು ಮೇಲ್ವಿಚಾರಣೆ ಹಾಗೂ ಮಹಿಳಾ ಮಂಡಲಿ ಯುವತಿ ಮಂಡಲಿಗಳ ಸಂಘಟನೆಯ ಕೆಲಸ ಕೈಗೊಂಡಿದ್ದೆ. ಈ ಸಂದರ್ಭ ಮಹಿಳೆಯರ ಸಂಘಟನೆ ಅದೆಷ್ಟು ಕಠಿಣ, ಮಹಿಳಾ ಸಮಾನತೆ, ಸ್ವಾತಂತ್ರ್ಯ ಇತ್ಯಾದಿ ಯಾವುದೇ ಪದಗಳ ಅರ್ಥ ಇಂದಿನ ಗ್ರಾಮೀಣ ಮುಗ್ಧ ಮಹಿಳೆಯರಿಗೆ ತಿಳಿದಿಲ್ಲ ಎಂಬ ಸತ್ಯವನ್ನು ತಿಳಿಸಿಕೊಟ್ಟಿತು.

ಗ್ರಾಮೀಣ ಮಹಿಳೆಯರಿಗಾಗಿ ವಯಸ್ಕರ ಶಿಕ್ಷಣ ಶಾಲೆ ಆರಂಭಿಸಲು ಹಳ್ಳಿಯ "ಪುರುಷ" (!) ಮುಖ್ಯಸ್ಥರನ್ನು ಭೇಟಿಯಾಗಿ ಮಾತನಾಡಿದಾಗ "ಓ, ಹೆಂಗ್ಸ್ರ್ಯಾಕ ಓದು.......? ನಮ್ ಗಂಡಸ್ರಿಗೆ ತೆಗಿರಿ ...."; "ಶಾಲ್ಯಾ ...." ಈ ರೀತಿಯ ಉದ್ಗಾರಗಳು ಬಂದುವು. ಸರಿ, ಮಹಿಳೆಯರಿಗೆ ಶಿಕ್ಷಣದ ಅವಶ್ಯಕತೆ ಇತ್ಯಾದಿಗಳ ಬಗ್ಗೆ ಭಾಷಣ ಹೊಡೆದ ನಂತರ ಹೇಗೋ ಒಪ್ಪಿಗೆ ಸಿಕ್ಕಿತು. ಶಾಲೆ ಸಾರ್ವಜನಿಕ ಸ್ಥಳದಲ್ಲಿ ಆರಂಭಿಸಿದರೆ 'ನಾಚಿಕೆ'ಯಿಂದ ಆ ಸ್ಥಳಗಳಿಗೆ ಹೆಚ್ಚು ಮಹಿಳೆಯರು ಬರುವುದಿಲ್ಲ. ಯಾವುದೋ ಒಂದು ಕೋಮಿನ ಬೀದಿಯಲ್ಲಿ ಮಾಡಿದರೆ ಮತ್ತೊಂದು ಕೋಮಿನ ಮಹಿಳೆಯರು ಆ ಬೀದಿಗೆ ಬರುವುದಿಲ್ಲ. ಹಳ್ಳಿಗಳಲ್ಲಿ ಎಲ್ಲ ಕೋಮಿನ ಪುರುಷರು ಬೆರೆಯುವಂತೆ ಮಹಿಳೆಯರು ಒಟ್ಟಾಗಿ ಬೆರೆಯುವುದಿಲ್ಲ. ಮೇಲಾಗಿ ಇದಕ್ಕೆ ಗಂಡಸರ ಆಕ್ಷೇಪಣೆ ಸಹ ಇರುತ್ತದೆ.

ಶಾಲೆಗೆ ಬರುವವರಲ್ಲಿ ಬಡ-ಮಧ್ಯಮ ವರ್ಗದ ಮಹಿಳೆಯರು ಇರುತ್ತಾರೆ. ಆದರೆ ಶ್ರೀಮಂತ ಮಹಿಳೆಯರು ತಮ್ಮ ಸ್ಥಾನಮಾನ, ಅಂತಸ್ತು ಇತ್ಯಾದಿಗಳ ಹೆಮ್ಮೆಯಿಂದ ಇದನ್ನೆಲ್ಲ ಕಲಿಯೋದು ಅವಮಾನವೆಂದೇ ಭಾವಿಸುತ್ತಾರೆ. ಕೆಲವರಿಗೆ ಇಷ್ಟವಿದ್ದರೂ ಮನೆಯವರು ಅವಕಾಶ ಮಾಡಿಕೊಡಲ್ಲ.

ಹಳ್ಳಿಗಳಲ್ಲಿ ಮಹಿಳೆ ಮತ್ತು ಯುವತಿಯರ ನಡುವೆ ಹೆಚ್ಚಿನ ಅಂತರವಿರುವುದಿಲ್ಲ. ೧೦-೧೫ಕ್ಕೆಲ್ಲ ವಿವಾಹ, ಹದಿನೈದು ವರ್ಷಕ್ಕೆಲ್ಲ ಎರಡು ಮಕ್ಕಳು. ಇಪ್ಪತ್ತು ವರ್ಷಕ್ಕೆಲ್ಲ ಸೊರಗಿಹೋಗಿರುತ್ತಾರೆ. ಇವರಿಗೆ ಕಲಿಯುವ ಆಸೆ ಇದ್ದರೂ ಗಂಡ-ಅತ್ತೆ ಮಾವ ಈ ಬಂಧನದಲ್ಲಿ ಸಿಲುಕಿ ಅಕ್ಷರ ಕಲಿಯುವ, ಹೆಚ್ಚಿನ ತಿಳುವಳಿಕೆ ಪಡೆಯುವ ತವಕವಿದ್ದರೂ ಅದು ಮುರುಟಿಹೋಗುತ್ತದೆ.

ಇನ್ನು ಅವಿವಾಹಿತ ತರುಣಿಯರು ಹಳ್ಳಿಯಲ್ಲಿ ವಿರಳವೆಂದೇ ಹೇಳಬೇಕು. ಇದ್ದರೂ ಅವರನ್ನು ಹೊರಗೆ ಕಳುಹಿಸೋಲ್ಲ "ನಮ್ಮೆಣ್ಣು ಮಕ್ಳು ತುಂಬಾ ತೊಟ್ಟಿಂದ ಹೊಸಲು ದಾಟಿಲ್ಲ .....";"ಈಗ ಹಂಗೆಲ್ಲ ಕಳಿಸಕಾಯ್ತದಾ"; "ತರೊ ಬರೋ ಹೆಣ್ಣು ...." ಇತ್ಯಾದಿ ಮಾತುಗಳನ್ನಾಡುತ್ತಾರೆ.

ಆ ತರುಣಿಯರ ಕಣ್ಣುಗಳಲ್ಲಿ ವಿದ್ಯೆ ಕಲಿಯುವ ಬೇಡಿಕೆಯ ಆಸೆ ಇರುತ್ತದೆ. ಆದರೆ ಅವರು ಅಸಹಾಯಕರು. ಅವರ ಪೆಚ್ಚುನೋಟ, ಶುಷ್ಕ ನಗೆ ಕಂಡಾಗ 'ಅಯ್ಯೋ, ನಮ್ಮ ಗ್ರಾಮೀಣ ಹೆಣ್ಣುಗಳ ಬವಣೆ ನೀಗೋದು ಹೇಗೆ? ಎಂದು? ಎಂದು ಮನಸ್ಸು ಚೀರುತ್ತದೆ.

"ಸ್ತ್ರೀ ಬಾಲ್ಯದಲ್ಲಿ ತಂದೆಯ ಅಧೀನದಲ್ಲೂ ಯೌವನದಲ್ಲಿ ಗಂಡನ ಅಧೀನದಲ್ಲೂ ಮುಪ್ಪಿನಲ್ಲಿ ಮಗನ ಅಧೀನದಲ್ಲೂ ಇರಬೇಕು" ಎಂದು "ಮಹಾತ್ಮ"(!) ಮನು ಹೇಳಿರುವ ವಾಕ್ಯವನ್ನು ಇಂದಿಗೂ ಚಾಚೂ ತಪ್ಪದೇ ನಡೆಸುತ್ತಿದ್ದಾರೆ.

ಪುರುಷರು ವಯಸ್ಕರ ಶಿಕ್ಷಣ ತರಗತಿಗೆ ಕ್ರಮಬದ್ಧವಾಗಿ ಬರುವಂತೆ ಮಹಿಳೆಯರಿಗೆ ಸಾಧ್ಯವಿಲ್ಲ. ಮನೆಯ ಒಳಗೆ-ಹೊರಗೆ ದುಡಿತ, ಮಕ್ಕಳ ಪೋಷಣೆ, ಬಸಿರು-ಬಾಣಂತನ, ಹಬ್ಬ, ಇತ್ಯಾದಿ ಸಮಸ್ಯೆಗಳಿಂದ ಅವರು ಕ್ರಮಬದ್ಧವಾಗಿ ಶಾಲೆಗೆ ಬರಲಾರರು. ಇಷ್ಟೆಲ್ಲಾ ತೀವ್ರ ಪ್ರಯತ್ನಗಳಾದ ಮೇಲೂ ಬೆರಳೆಣಿಕೆಯಷ್ಟು ಮಂದಿಯೂ ಅಕ್ಷರಸ್ಥರಾಗುವುದಿಲ್ಲ. ಒಂದು ವೇಳೆ ಆದರೆ ಅದೊಂದು ದೊಡ್ಡ ಸಾಹಸವೇ ಸರಿ.

X X X

ಮಹಿಳಾಮಂಡಲಿ ಮತ್ತು ಯುವತಿ ಮಂಡಲಿಗಳ ಸಂಘಟನೆಯ ಮೂಲಕವೂ ನಾವು ಗ್ರಾಮದ ಮಹಿಳೆಯರನ್ನೆಲ್ಲ ಸಂಘಟಿಸುವುದು ಅಸಾಧ್ಯ. ಇಂತಹ ಸಂಘಗಳಿಗೆ ಬಡ ಮಹಿಳೆಯರು ಸದಸ್ಯರಾಗುವುದಿಲ್ಲ. "ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಏಕೆ?" ಎನ್ನುತ್ತಾರೆ.

ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಆತ್ಮವಿಶ್ವಾಸ, ದೃಢತೆಗಿಂತ ಪುರುಷನೊಡನೆ ಶರಣಾಗತಭಾವವೇ ಹೆಚ್ಚು. ಈ ಭಾವನೆ ಅವರಲ್ಲಿ ರಕ್ತಗತವಾಗಿದೆ.. ಶಾಸ್ತ್ರ, ಪುರಾಣ, ಹರಿಕತೆಗಳ ಮೂಲಕ ಅದನ್ನು ಇನ್ನೂ ಗಟ್ಟಿಗೊಳಿಸಲಾಗುತ್ತಿದೆ.

ಗ್ರಾಮೀಣ ಮಹಿಳೆಯರು ಹಿಂದಿನ ಅರ್ಥಹೀನ ಸಾಂಪ್ರದಾಯಿಕ ಸಂಸ್ಕೃತಿಗೆ ಹೆಚ್ಚಿನ ಬೆಂಬಲ ನೀಡುತ್ತಾರೆ. ಹೊಸ ವಿಚಾರಗಳನ್ನು ತಿಳಿಯುವುದಕ್ಕಿಂತ ಹಳೆಯ ಆಚರಣೆಗಳ ಬಗ್ಗೆ ಹೆಚ್ಚಿನ ಒಲವು ತೋರಿಸುತ್ತಾರೆ. ಜಾತಿ, ಬಾಲ್ಯವಿವಾಹ, ಹಿಂದೂ ಹೆಣ್ಣಿಗೆ ಅತ್ಯಗತ್ಯವಾಗಿ ಬೇಕಾದ ಬಳೆ, ಕುಂಕುಮ, ತಾಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಬಲವಂತವಾಗಿ ಹೆಣ್ಣು ಮಕ್ಕಳ ಮೇಲೆ ಹೊರಿಸುತ್ತಾರೆ. ಸೀರೆ, ಚಿನ್ನ ಮುಂತಾದ ಮಾತುಗಳೇ ಸಂಘದಲ್ಲಿ ಹೆಚ್ಚಾಗಿ ಹೊರಡುತ್ತವೆ. ಯುವತಿಯರು ಎಲ್ಲ ವಿಚಾರಗಳಲ್ಲೂ ತಮ್ಮ ತಂದೆ-ತಾಯಿಯರನ್ನು ಅವಲಂಬಿಸುವುದರಿಂದ ಹಿರಿಯರು ಹಾಕಿದ ಗೆರೆದಾಟುವ ಸಾಹಸಕ್ಕೆ ಹೋಗುವುದಿಲ್ಲ. ಈನಡುವೆ ಸಂಸ್ಥೆಗಳ ಸಂಘಟನೆ ಮಾಡುವವರು ಪ್ರಗತಿಪರರಾದರೂ ಅವರ ಧೋರಣೆಗೆ ಹೆಚ್ಚಿನ ಬೆಂಬಲ ಸಿಗುವುದಿಲ್ಲ. ಹೀಗಾಗಿ ಗ್ರಾಮಾಂತರ ಪ್ರದೇಶದ ಮಹಿಳಾ ಸಮಾಜಗಳು ಹಿಂದಿನಹಾಡು, ಹಸೆ, ಸರಸ್ವತೀ ಪೂಜೆಯಂತಹ ಗೊಡ್ಡು ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲೇ ತೊಡಗಿವೆ.

ಗ್ರಾಮೀಣ ಬಡ-ಮಧ್ಯಮ ವರ್ಗದ ಹೆಣ್ಣು ಹುಟ್ಟುತ್ತಿರುವಾಗಲೇ 'ಅಯ್ಯೋ ಹೆಣ್ಣೇ!' ಎಂಬ ಉದ್ಗಾರ. ಬೆಳೆದಂತೆ ಶಾಲೆ ಕಾಣದೆ (ಅದೃಷ್ಟವಿದ್ದರೆ ಶಾಲೆ) ಮಕ್ಕಳನ್ನು ಆಡಿಸೋದು, ಕುರಿ-ಹಸು ಮೇಯಿಸೋದು; ಹತ್ತು-ಹನ್ನೆರಡಕ್ಕೆಲ್ಲ ಗದ್ದೆ ಕೆಲಸ-ಮನೆಗೆಲಸ; ಹನ್ನೆರಡು ಹದಿಮೂರಕ್ಕೆಲ್ಲ ವಿವಾಹವಾಗಿ ಗಂಡನ ಮನೆಯೆಂಬ ಮತ್ತೊಂದು ಕೊಂಪೆಗೆ ಸೇರಿ ಕೆಲಸದ ಯಂತ್ರದ ಜೊತೆಗೆ ಹೆರಿಗೆ ಯಂತ್ರವೂ ಆಗಿ ಬದುಕಿನಿಂದ ಒಂದು ದಿನ ದೂರವಾಗೋದು.

ಈ ರೀತಿಯ ಮುಗ್ಧ, ಅಜ್ಞಾನದ ಅಂಧಕಾರದಲ್ಲಿ ಮುಳುಗಿರುವ, 'ಪತಿಯೇ ದೈವ'ವೆಂದು ಭಕ್ತಿಯಿಂದ ಭಜಿಸುವ ಈ ಹೆಂಗಳೆಯರ ಮುಂದೆ ಸ್ತ್ರೀ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ, ಸಮಾನತೆ, ಶೋಷಣೆ ಇತ್ಯಾದಿ ಪದಗಳ ಅರ್ಥವನ್ನು ವಿವರಿಸೋದು ಹೇಗೆ? ಎಂದು ನಾವು ಚಿಂತಿಸಬೇಕಾಗುತ್ತದೆ. ಗ್ರಾಮೀಣ ಮಹಿಳೆಯರು ಎಚ್ಚೆತ್ತುಕೊಂಡರೆ ಮಾತ್ರ ಮಹಿಳಾ ವಿಮೋಚನಾ ಚಳುವಳಿ ಪೂರ್ಣತೆಯನ್ನು ಪಡೆಯುತ್ತದೆ. ಇಲ್ಲದಿದ್ದರೆ ಅದು ಈಗಿನಂತೆ ಅರೆಬೆಂದ ತ್ರಿಶಂಕು ಸ್ಥಿತಿಯಲ್ಲೇ ಇರುತ್ತದೆ. ಗ್ರಾಮೀಣ ಮಹಿಳೆಯರೂ ಎಚ್ಚೆತ್ತುಕೊಂಡು ಸಂಘಟಿತರಾಗಬೇಕಾದರೆ ಮೊದಲು ಅವರಿಗೆ ಶಿಕ್ಷಣದ ಅಗತ್ಯವಿದೆ. ಈಗಲ್ಲವಿದ್ದರೂ ಇನ್ನು ಒಂದೆರಡು ದಶಕಗಳಲ್ಲಾದರೂ ಗ್ರಾಮೀಣ ಪ್ರದೇಶದಲ್ಲಿ ಈ ರೀತಿಯ ಸಂಘಟನೆಗಳು ಯಶಸ್ವಿಯಾಗಬಹುದು ಎಂಬ ಆಶಾಭಾವನೆಯನ್ನು ತಾಳಬೇಕಷ್ಟೇ.

※

ಪಟ್ಟ-ಚಟ್ಟ

ಕಡೆಗೂ, ಈ ಜಂಬೂದ್ವೀಪದ 'ಐಕ್ಯತ ರಕ್ಷಕ'
ಹೆಬ್ಬಾಲದ ವಂಶೋದ್ಧಾರಕ ಕುಡಿಗೆ
ಗುಲಾಮೀ ಸಂತತಿಯ ಕೇಕೆ ವಿಕಟಾಟ್ಟಹಾಸದ ನಡುವೆ
ಜರುಗೇ ಹೋಯಿತು-
ಇಂದ್ರ ವೈಭವದ ಯುವರಾಜ ಪಟ್ಟ!
ಜತೆಯೇ, ಸದ್ದಿಲ್ಲದೆ ತಯಾರಾಯಿತು-
ಬಡಬೋರನ ಗಣತಂತ್ರದ ಚಟ್ಟ!
[ಜೀವಚ್ಛವದ ಸುತ್ತಾ ಮುತ್ತ
ಬರಿದೇ ವಟಗುಟ್ಟವೆ
ವಿಧ ವಿಧ ವಿರೋಧೀ ಲಟ್ಟ:
ಕುಟ್ಟುತ ತಮ ತಮ ಹೊಟ್ಟೆ!]

-ಬಿ. ಆರ್.
ಭದ್ರಾವತಿ.

ಓದುಗರ ಪತ್ರಗಳು

ಯಕ್ಷಗಾನ: ಒಂದು ಅನುಭವ
(ಪುರಸಭೆಯವರಿಗೊಂದು ಕಿವಿಮಾತು)

ಮಾನ್ಯರೇ,

ಕೊಪ್ಪ ಸಿನಿಮಾ ಮಂದಿರದ ಹಿಂಭಾಗದಲ್ಲಿ(ಅದು ಮೈದಾನದಂತಿಲ್ಲ; ಏರುತಗ್ಗುಗಳಿಂದ ಕೂಡಿದೆ.) ಯಕ್ಷಗಾನ ನಡೆಯುವುದು ಎಲ್ಲರಿಗೂ ತಿಳಿದ ವಿಷಯವೆ. ಆದರೆ ಆ ಜಾಗ ಯಕ್ಷಗಾನ ಅಥವಾ ಇತರ ಯಾವುದೇ ಪ್ರದರ್ಶನಗಳನ್ನು ನಡೆಸಲು ಎಷ್ಟು ಯೋಗ್ಯ ಎಂದು ಯಕ್ಷಗಾನಕ್ಕೆ ಹೋದವರಿಗೆ ಮಾತ್ರ ಗೊತ್ತಾಗುವುದು.

೨೮-೨-೬೨ರಂದು ಕೊಪ್ಪ ಬ್ಯಾಂಕರ್ಸ್ ರಿಕ್ರಿಯೇಷನ್ ಕ್ಲಬ್‌ನ ಸಹಾಯಾರ್ಥ ಸಾಲಿಗ್ರಾಮ ಮೇಳದವರ ಯಕ್ಷಗಾನ ನಡೆದಿತ್ತು. ನಾನು ೧೦ ರೂ.ನ ಟಿಕೆಟ್ ತೆಗೆದುಕೊಂಡು ಒಳಗೆ ಹೋದಾಗ ಎದುರುಗಡೆಯ ಎರಡು ಸಾಲುಗಳು ಆಗಲೇ ತುಂಬಿತ್ತು. ಮೂರನೇ ಸಾಲಿನಲ್ಲಿ ಒಂದೆರಡು ಸೀಟುಗಳು ಮಾತ್ರ ಖಾಲಿ ಇದ್ದವು. ಒಂದರಲ್ಲಿ ನಾನು ಕುಳಿತುಕೊಂಡೆ. ಪಕ್ಕದಲ್ಲಿ ಸ್ವಲ್ಪ ಕುಳ್ಳಗಿರುವ ವ್ಯಕ್ತಿಯೊಬ್ಬರು ಕುಳಿತಿದ್ದರು. ನನಗೆ ವೇಷಧಾರಿಗಳ ಕಿರೀಟ ಮಾತ್ರ ಕಾಣಿಸುತ್ತಿತ್ತು. ಪಾಪ, ಆ ವ್ಯಕ್ತಿಗೆ ಅದೂ ಕಾಣುತ್ತಿರಲಿಲ್ಲವಂತೆ. ಮುಂದೆ ಕುಳಿತವರ ತಲೆ ಮಾತ್ರ ಕಾಣುತ್ತಿತ್ತಂತೆ. ಸ್ವಲ್ಪ ಪ್ರಯತ್ನಪಟ್ಟು ತಲೆ ಎತ್ತಿದರೆ ಹಿಂದುಗಡೆ ಕೂತವರು 'ತಲೆ ತಗ್ಗಿಸಿ' ಎಂದು ಬಯ್ಯುತ್ತಿದ್ದರು. ಕುಣಿತಕ್ಕೆ ಹೆಸರುವಾಸಿಯಾದ ಸಾಲಿಗ್ರಾಮ ಮೇಳದವರ ಕುಣಿಯುವ ಕಾಲುಗಳು ನಮಗೆ ಕಾಣದೇ ಹೋದವು. ಇವಕ್ಕೆಲ್ಲಾ ಕಾರಣ ನೆಲ ಸಮತಟ್ಟಾಗಿಲ್ಲ. ಅಲ್ಲಲ್ಲಿ ಏರು ತಗ್ಗುಗಳು ಇವೆ. ಈ ಕಡೆ ಪುರಸಭೆಯ ಗಮನ ಈವರೆಗೂ ಹರಿದಿಲ್ಲ. ಏರು ಪೇರಾದ ನೆಲ ಒಂದು ಕಾರಣವಾದರೆ, ತಗ್ಗಾದ ರಂಗಸ್ಥಳ ಇನ್ನೊಂದು ಕಾರಣವಾಗಿತ್ತು.

ಸಾಕಷ್ಟು ಜನ ತುಂಬಿದ್ದರಿಂದ ಜವಾಬ್ದಾರಿ ವಹಿಸಿಕೊಂಡಿದ್ದ ಬ್ಯಾಂಕಿನ ಉದ್ಯೋಗಿಗಳು ಟಿಕೇಟು ಕೊಡುವ ಕೆಲಸವನ್ನು ಮಾತ್ರ ನಿಷ್ಠೆಯಿಂದ ಮಾಡಿದರು; ಉಳಿದ ಕಡೆ ಹೆಚ್ಚಾಗಿ ಗಮನ ಹರಿಸಲೇ ಇಲ್ಲ. ಮಧ್ಯಂತರದಲ್ಲಿ ಮಾತ್ರ ಲಾಭ ಗಳಿಸಿ ಕೊಟ್ಟ ಪ್ರೇಕ್ಷಕರಿಗೆ ಅಭಿನಂದನೆ ಸಲ್ಲಿಸಲು ಮರೆಯಲಿಲ್ಲ. ಇವರ ಬೇಜವಾಬ್ದಾರಿಗೆ ಒಂದು ನಿದರ್ಶನವೆಂದರೆ, ನಮ್ಮ ಮುಂದಿನ ಸೀಟಿನಲ್ಲಿ ಒಬ್ಬ ಮೂರು ಸೀಟುಗಳನ್ನು ರಿಜರ್ವ್ ಮಾಡಿದ್ದ. ಯಾರಾದರೂ ಕೇಳಿದರೆ, 'ನಮ್ಮ ಜನ ಇದ್ದಾರೆ, ಈಗ ಬರುತ್ತಾರೆ' ಎನ್ನುತ್ತಿದ್ದ. ಆದರೆ ಬೆಳಗಿನವರೆಗೂ ಆ ಸೀಟುಗಳು ಹಾಗೆಯೇ ಇದ್ದವು. ಯಾರೂ ಬಂದಿರಲಿಲ್ಲ. ಇಂತಹ ಕಿರಿಕಿರಿಗಳಿಂದ ಕೆಲವರು ಹಾಗೆಯೇ ನಿದ್ರೆ ಮಾಡಿದರು. ಕೆಲವರು ಬೇಗನೇ ಎದ್ದುಹೋದರು. ಎದುರುಗಡೆಯವರಿಗೆ ತಲೆ ತಗ್ಗಿಸಲು ಹೇಳಿ "ನಾವು ಹಣ ಕೊಟ್ಟಿದ್ದೇವೆ., ಪುಕ್ಕಟೆ ಅಲ್ಲ" ಎಂದು ಬೈಸಿಕೊಂಡರ, ಇನ್ನು ಕೆಲವರು.

ಟಿ. ಜಯರಾಂ
ಕೊಪ್ಪ-ಕೂಗೆ

ಒಂದೇ ಎತ್ತಿನಿಂದ ಬೇಸಾಯ ಸಾಧ್ಯ

ರೈತ ಬಾಂಧವರೇ, ಇತ್ತ ಕೇಳಿ.

ನಿಮಗೊಂದು ಹೊಸ ಸುದ್ದಿ ತಿಳಿಸುತ್ತಿದ್ದೇನೆ: ಒಂದೇ ಎತ್ತಿನಲ್ಲಿ ಬೇಸಾಯ ಸಾಧ್ಯ

ಜೊತೆ ಎತ್ತು ಕೊಳ್ಳಲಾಗದ ಕಡು ಬಡವರು ಕೇವಲ ಒಂದೇ ಎತ್ತಿನಲ್ಲಿ ೫ ಎಕರೆ ತರಿ ಬೇಸಾಯ ಮಾಡಬಹುದೆಂದು ನಾನು ಸ್ವತಃ ಕಂಡುಕೊಂಡು ಮೂರು ವರ್ಷಗಳಿಂದಲೂ ಇದೇ ಕ್ರಮವನ್ನು ಅನುಸರಿಸುತ್ತಿರುವೆನು. ನೇಗಿಲು, ನೊಳ್ಳಿ, ಪಟ್ಲರ್ ಮತ್ತು ಒಕ್ಕಣೆ ಎಲ್ಲವನ್ನು ಒಂದೇ ಎತ್ತಿನಿಂದ ಮಾಡಬಹುದು.

ಈ ವಿಚಾರವನ್ನು ಎಲ್ಲಾ ರೈತರೂ ತಿಳಿದುಕೊಂಡು ಈ ಕ್ರಮವನ್ನು ಅನುಸರಿಸಿದರೆ ನಿಮಗೂ ಒಳಿತಾಗುವುದೆಂದು ನಂಬಿಕೊಂಡಿದ್ದೇನೆ.

ನೇಗಿಲು, ನೊಳ್ಳಿ ಹಾಗೂ ಪಟ್ಲರ್‌ಗಳನ್ನು ಹೊಸಮಾದರಿಯಾಗಿ ತಯಾರಿಸಿದ್ದುದನ್ನೇ ಉಪಯೋಗಿಸಬೇಕು.

ಆದುದರಿಂದ ಜನರ ಸಹಕಾರ ಹಾಗೂ ಸರ್ಕಾರದ ಸೌಲಭ್ಯಗಳು ದೊರೆತಲ್ಲಿ ಒಂದು ಕರ್ಮಶಾಲೆಯನ್ನು ತೆರೆದು ಅದರ ಮೂಲಕ ಎಲ್ಲಾ ಸೌಲಭ್ಯಗಳೂ ರೈತರಿಗೆ ದೊರಕುವಂತಾಗಿ ಅವರು ಇದರ ಪ್ರಯೋಜನ ಪಡೆಯುವರೆಂದು ನಂಬಿರುತ್ತೇನೆ.

ಆಸಕ್ತಿಯುಳ್ಳವರು ಕೆಳಕಂಡ ವಿಳಾಸದಲ್ಲಿ ವಿಚಾರಿಸಬಹುದು:

ಶ್ರೀನಿವಾಸಯ್ಯ, ಹೆಗ್ರೆ,
ಉಳವಳ್ಳಿ, ಗ್ರಾಮ,
ತ್ಯಾವಣ ಅಂಚೆ, ಶೃಂಗೇರಿ ತಾ॥

ಬೇಕಾಗಿದೆ: ಪೋಲೀಸ್ ಕಾವಲು!

ಮಾನ್ಯರೆ,

ಕೊಪ್ಪದ ಬಾಳಗಡಿಯಲ್ಲಿ ತಹಸೀಲ್ದಾರರ ಮನೆಯ ಹಿಂದುಗಡೆ ಇರುವ ೨೩ ಹಳೇ ಕಾಲದ ಕ್ವಾರ್ಟರ್ಸ್‌ಗಳ ನಿವಾಸಿಗಳು ಮನುಷ್ಯಮಾತ್ರರಿಗೆಲ್ಲ ಬೇಕಾದ ಕನಿಷ್ಠ ಸೌಕರ್ಯಗಳಿಗಾಗಿ ಸಂಬಂಧಪಟ್ಟವರಲ್ಲಿ ಮನವಿ ಮಾಡಿ ಮಾಡಿ ದಣಿದು ಹೋಗಿದ್ದೇವೆ.

ಇಲ್ಲಿ ಮೊದಲು ೨ ನಲ್ಲಿಗಳಲ್ಲಿ ನೀರು ಬರುತ್ತಿದ್ದು ನಂತರ ಒಂದರಲ್ಲಿ ಮಾತ್ರ ಬರುತ್ತಿತ್ತು. ಅದೂ ಸುಸೂತ್ರ ಬರದಾಗ ಜನ ನಲ್ಲಿಯನ್ನು ಕಿತ್ತು ನೀರ ಜೋಡಣೆ ಇರುವಲ್ಲಿಯೇ ಹೊಂಡ ಮಾಡಿಕೊಂಡು ನೀರು ಹಿಡಿಯುತ್ತಿದ್ದಾರೆ. ಇದರಲ್ಲಿಯೇ ಎಲ್ಲಾ ಸಂಸಾರಗಳವರೂ ನೀರು ಹಿಡಿಯಬೇಕಾಗಿರುವುದರಿಂದ ಜಗಳ ತಲೆದೋರಿ, ಅವಾಚ್ಯ ಶಬ್ದಗಳಿಂದ ಬೈದಾಡುತ್ತಾ ಒಬ್ಬರನ್ನೊಬ್ಬರು ದ್ವೇಷಿಸುವ ಮಟ್ಟಕ್ಕೆ ಮುಟ್ಟಿದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಹೊಡೆದಾಟವೂ ನಡೆಯಬಹುದೆಂದು ಎಲ್ಲರಿಗೂ ಭಯ ಉಂಟಾಗಿದೆ.

ಆದ್ದರಿಂದ ನಮ್ಮ ಕೊನೇ ಬೇಡಿಕೆ: ನಲ್ಲಿಯ ಹೊಂಡದಲ್ಲಿ ಜಗಳ ಆಗುವುದನ್ನು ನೋಡಿಕೊಳ್ಳಲು (ತಡೆಗಟ್ಟಲು?) ಒಬ್ಬ ಪೋಲೀಸರನ್ನಾದರೂ ಕಾವಲು ಹಾಕಿ.

ಅಧಿಕಾರಿಗಳು ನಮ್ಮ ಈ ಒಂದು ಬೇಡಿಕೆಯನ್ನಾದರೂ ಈಡೇರಿಸಲಿ ಎಂದು ನಮ್ರವಾಗಿ ಕೇಳುತ್ತೇವೆ.

ನಿವಾಸಿಗಳ ಪರವಾಗಿ,
ಎಂ. ಎಸ್. ಶೆಟ್ಟಿ.

ಸಿ. ಪಿ. ಐ. ಸಭೆ

ಚಿಕ್ಕಮಗಳೂರು: ಭಾರತ ಕಮ್ಯೂನಿಸ್ಟ್ ಪಕ್ಷದ ಸದಸ್ಯರ ಮತ್ತು ಹಿತೈಷಿಗಳ ಸಭೆ ದಿನಾ. ೧೪ರಂದು ಇಲ್ಲಿ ಎನ್. ಆರ್ ರಾಮಚಂದ್ರರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಭಾಗವಹಿಸಿದ್ದ ಪಕ್ಷದ ರಾಜ್ಯ ನಿಯಂತ್ರಣ ಆಯೋಗದ ಸದಸ್ಯರೂ ಎ. ಐ. ಟಿ. ಯು. ಸಿ. ರಾಜ್ಯ ಮಂಡಳಿಯ ಅಧ್ಯಕ್ಷರೂ ಆದ ಎಂ. ಸಿ. ನರಸಿಂಹನ್‌ರವರು, ರಾಷ್ಟ್ರೀಯ ಅಂತರರಾಷ್ಟ್ರೀಯ ವಿಚಾರಗಳನ್ನಲ್ಲದೆ, ಇತ್ತೀಚೆಗೆ ನಡೆದ ರಾಜ್ಯ ಸಮ್ಮೇಲನ ಹಾಗೂ ಪಕ್ಷದ ರಾಜಕೀಯ ನಿಲುವುಗಳ ಬಗ್ಗೆ ಸಭೆಗೆ ವಿವರಿಸಿದರು.

ಕರ್ನಾಟಕ ಸರ್ಕಾರ ಈಗ ಕೋಟಿ ಕಾರ್ಮಿಕರಿಗೆ ನಿಗದಿ ಮಾಡಿರುವ ಕನಿಷ್ಠ ಕೂಲಿಯು ನೆರೆಯ ರಾಜ್ಯಗಳಿಗೆ ಹೋಲಿಸಿದರೆ ತೀರಾ ಕಮ್ಮಿಯಾಗಿದ್ದು, ಇದು ರಾಜ್ಯ ಸರ್ಕಾರಕ್ಕೆ ಕಾರ್ಮಿಕ ವರ್ಗದ ಮೇಲೆ ಇರುವ 'ಪ್ರೀತಿ'ಯ ದ್ಯೋತಕವಾಗಿದೆ ಎಂದು ಸಭೆ ಅಭಿಪ್ರಾಯಪಟ್ಟಿತು.

ಭಾರತೀಯ ಶಿಕ್ಷಣ ಮಂಡಲದ ಸಭೆ

ಕೊಪ್ಪ: ಇಲ್ಲಿ ದಿನಾ. ೯ರಂದು ವೆಂಕಟೇಶ ಭಟ್ಟರ ಅಧ್ಯಕ್ಷತೆಯಲ್ಲಿ ಭಾರತೀಯ ಶಿಕ್ಷಣ ಮಂಡಲದ ಸ್ಥಾನೀಯ ಸಭೆ ನಡೆಯಿತು.

ಶಿಕ್ಷಣ ಪದ್ಧತಿಯ ಮೂಲ ದೋಷಗಳನ್ನು ಗುರುತಿಸಿ, ಶಿಕ್ಷಣ ಪದ್ಧತಿಯನ್ನು ಬದಲಾಯಿಸಬೇಕು; ವೈಜ್ಞಾನಿಕ ವಿಧಾನಗಳ [illegible] ಪ್ರಾಯೋಗಿಕ ಶಿಕ್ಷಣ ಅವಶ್ಯ; ವೃತ್ತಿಪರ ಶಿಕ್ಷಣ ಜಾರಿಗೆ ಬರಬೇಕು; ಶಿಕ್ಷಣದಲ್ಲಿ ರಾಜಕೀಯ ತಲೆಹಾಕಬಾರದು ಮುಂತಾದ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ಹೆಚ್. ವಿ. ಹನುಮಪ್ಪನವರು ಭಾ. ಶಿ. ಮಂಡಲದ ಸ್ಥಾಪನೆ ಮತ್ತು ಧ್ಯೇಯಗಳನ್ನು ವಿವರಿಸಿದರು. ಜಿ. ಎಸ್. ವಿ. ಮೂರ್ತಿ ವಂದಿಸಿದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ವಿ. ಕೆ. ಸುಂದರೇಶ್ ಸಭೆಯಲ್ಲಿ ಮಾತನಾಡಿದರು.

ಚಿಕ್ಕಮಗಳೂರಿನಲ್ಲಿ ವಿಚಾರ ಸಂಕಿರಣ
ಸಾಮಾಜಿಕ ಶೋಷಣೆ ಮತ್ತು ವಿಚಾರವಾದ

ಚಿಕ್ಕಮಗಳೂರು: ಜಿಲ್ಲಾ ವಿಚಾರವಾದಿ ವೇದಿಕೆಯ ಆಶ್ರಯದಲ್ಲಿ 'ಸಾಮಾಜಿಕ ಶೋಷಣೆ ಮತ್ತು ವಿಚಾರವಾದ' ಕುರಿತ ವಿಚಾರ ಸಂಕಿರಣವೊಂದು ದಿನಾ. ೧೪ರಂದು ಇಲ್ಲಿ ನಡೆಯಿತು.

'ಕೋವೂರ್ ನೆನಪಿನ ಸವಾಲುಗಳು, ಎಂಬ ಕಿರು ಪ್ರಕಟಣೆಯನ್ನು ಬಿಡುಗಡೆ ಮಾಡಿದ ಟಿ. ಸುಬ್ರಹ್ಮಣ್ಯಂ, ವೈಜ್ಞಾನಿಕ ಪರೀಕ್ಷೆಯಲ್ಲಿ ಅತೀಂದ್ರಿಯ ಶಕ್ತಿಯನ್ನು ಸಾಬೀತು ಪಡಿಸುವ ಪವಾಡ ಪುರುಷರಿಗೆ ಹತ್ತು ಸಾವಿರ ರೂ ಗಳ ಬಹುಮಾನವನ್ನು ಘೋಷಿಸಿದರು.

'ಪವಾಡ ಪುರುಷರು ಮತ್ತು ವಿಚಾರವಾದ' ಕುರಿತು ಮಾತಾಡಿದ ಕೆ. ರಾಮದಾಸ್, ಬಾಬಾಗಳು, ಧರ್ಮಗುರುಗಳು, ಧಾರ್ಮಿಕ ಕಟ್ಟುಪಾಡುಗಳು ಜನರನ್ನು ಅರಿವುಜ್ಞಾನವಸ್ಥೆಯಲ್ಲಿ ಇರಿಸುವುದರಿಂದ ಸಮಾಜಕ್ಕೆ ಆಗುವ ಕೆಡುಕನ್ನು ವಿವರಿಸಿದರು.

'ಶೋಷಿತರು ಮತ್ತು ವಿಚಾರವಾದ' ವಿಷಯದ ಮೇಲೆ ಮಾತಾಡಿದ ಬಿ. ಕೆ. ಸುಂದರೇಶ್, ಕರ್ಮ ಸಿದ್ಧಾಂತ, ಮೋಕ್ಷ ಸಿದ್ಧಾಂತ, ಮಾಯೆ, ಮೇಲು ಕೀಳು ಮುಂತಾದ ವಿಚಾರಗಳನ್ನೊಳಗೊಂಡ ಭಾವನಾವಾದದಿಂದ ಹೊರಬರಲು ಶೋಷಿತರಿಗೆ ಯಾವುದನ್ನೂ ಪ್ರಶ್ನಿಸುವ, ಯೋಚಿಸುವ, ಪರಿಶೀಲಿಸುವ ಆಧಾರದ ಭೌತಿಕವಾದವೇ ಅಗತ್ಯವೆಂದು ಅಭಿಪ್ರಾಯಪಟ್ಟರು.

'ಬುದ್ಧಿಜೀವಿಗಳು ಮತ್ತು ವಿಚಾರ ಪ್ರಸಾರದ ಬಗ್ಗೆ ಮಾತಾಡಿದ ಆರ್. ವಿ. ವೆಂಕಟೇಶಮೂರ್ತಿ ವೇದದ ಮೊತ್ತ ಪತ್ರಿಕೆಗಳು ಧರ್ಮದ ಮುಸುಕಿನಲ್ಲಿ ಪ್ರಚಲಿತ ವಿರುವ ಕೋಟಿಕು, ಗೊತ್ತು ಯಥಾಸ್ಥಿತಿಯನ್ನೇ ಮುಂದುವರಿಸಿಕೊಂಡು ಹೋಗಲು ಸಹಕರಿಸುತ್ತಿವೆ ಎಂದು ಆರೋಪಿಸಿದರು.

'ದಲಿತರು ಮತ್ತು ವಿಚಾರವಾದ' ಕುರಿತು ಎಂ. ಡಿ. ಗಂಗಯ್ಯ ಮಾತನಾಡಿ, ದಲಿತರು ಜಾತಿ-ಮತಗಳ ಕಟ್ಟು ಕಳಚಿ ವಿಶಾಲ ಜನಸಮುದಾಯದೊಂದಿಗೆ ಬೆರೆತು ನ್ಯಾಯದ, ಮನುಷ್ಯ ಧರ್ಮದ ಸಾಮಾಜಿಕ ವ್ಯವಸ್ಥೆಗಾಗಿ ಹೋರಾಡಬೇಕೆಂಬುದು ವಿಚಾರವಾದ ಪ್ರೇರಕವಾಗಬೇಕೆಂದರು.

ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಎಂ. ಸಿ. ನರಸಿಂಹನ್, 'ಸಾಮಾಜಿಕ ಹಾಗೂ ಧಾರ್ಮಿಕ ಮೌಢ್ಯಗಳು ಮತ್ತು ವಿಚಾರವಾದ' ಕುರಿತು ಮಾತನಾಡಿದರು. [illegible] ಸಾಮಾಜಿಕ [illegible] ಸಾವಿರ ವರ್ಷಗಳಿಂದ ಬೆಳೆದು [illegible] ಧರ್ಮದ ಹೆಸರಿನ ಮೌಢ್ಯಗಳನ್ನು [illegible] ಅಭಿಪ್ರಾಯಗಳನ್ನು ಹೊಂದಿದ ಜನ [illegible] ಕೋಪಕರು ಕೆಟ್ಟು [illegible].

[illegible] ಮಂಜಪ್ಪ [illegible] ದಾ. ಟಿ. ಸುಬ್ರಹ್ಮಣ್ಯಂ ವಂದಿಸಿದರು.

ವಿ. ಆರ್. ಸಿ. ಶೇಖರ್‌ರವರ ಚಿತ್ರಗಳ ಪ್ರದರ್ಶನ

ಶೃಂಗೇರಿಯವರಾದ ಕಲಾವಿದ ವಿ. ಆರ್. ಸಿ. ಶೇಖರ್ ಅವರ [illegible] ಪ್ರದರ್ಶನ [illegible] ಮೇಲ್ಮನೆಯಲ್ಲಿ ದಿನಾ. ೧೯ ರಿಂದ [illegible] ವರೆಗೆ ಏರ್ಪಡಿಸಿದೆ. [illegible] ೩೦ನೆಯ ಕಲಾ ಪ್ರದರ್ಶನವಾಗಿದೆ.

ಲೋ. ಇಲಾಖೆ ನೌಕರರ ಪಿಕೆಟಿಂಗ್ ಮುಂದೂಡಿಕೆ

ಚಿಕ್ಕಮಗಳೂರು: ಅತಿ ಕಡಿಮೆ ದಿನಗೂಲಿ, ನಿಗದಿತ ಸಮಯಕ್ಕೆ ಸಂಬಳ ಕೊಡದಿರುವುದು, ೧೫-೨೦ ವರ್ಷ ಕೆಲಸ ಮಾಡಿದವರನ್ನು ಕೆಲಸದಿಂದ ತೆಗೆಯುವುದು ಮುಂತಾದವುಗಳ ವಿರುದ್ಧ ಪ್ರತಿಭಟಿಸುವ ಸಲುವಾಗಿ ಮಾ. ೧೫ ರಿಂದ ಲೋಕೋಪಯೋಗಿ ಇಲಾಖೆಯ ಕಚೇರಿಗಳ ಮುಂದೆ ಪಿಕೆಟಿಂಗ್ ನಡೆಸಲು ದಿನಗೂಲಿ ನೌಕರರು ನಿರ್ಧರಿಸಿದ್ದರು. ಈಗ ಸರ್ಕಾರ ಕನಿಷ್ಠ ಕೂಲಿ ನಿಗದಿ ಮಾಡಿರುವುದರಿಂದ ಪಿಕೆಟಿಂಗ್‌ನ್ನು ಮುಂದೂಡಿ, ಕನಿಷ್ಠ ಕೂಲಿಯ ಹೆಚ್ಚಳಕ್ಕಾಗಿ ಮೊಕದ್ದಮೆ ಹೂಡಲು ನೌಕರರ ಸಂಘ ನಿರ್ಧರಿಸಿದೆ. ಚಿಕ್ಕಮಗಳೂರಲ್ಲಿ ಮಾ. ೧೫ ರಂದು ಸಭೆ ಸೇರಿದ್ದ ನೌಕರರು ಪ್ರಧಾನ ಕಾರ್ಯದರ್ಶಿ ಬಿ. ಕೆ. ಸುಂದರೇಶ್‌ರವರ ನೇತೃತ್ವದಲ್ಲಿ ಕಾರ್ಯಪಾಲಕ ಅಭಿಯಂತರನ್ನು ಭೇಟಿ ಮಾಡಿ ಮನವಿಪತ್ರವನ್ನು ಸಲ್ಲಿಸಿದರು ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಜಯಪುರ ಎಜುಕೇಶನ್ ಸೊಸೈಟಿಗೆ ಸಭಾ ಮಂದಿರ ಕೊಡುಗೆ

(ವರದಿ: ಶಂ. ಸ. ಶೇಷಗಿರಿ)

ಜಯಪುರ: ಅಲಗೇಶ್ವರ ಟೀ ಎಸ್ಟೇಟಿನ ಮ್ಯಾನೇಜಿಂಗ್ ಡೈರೆಕ್ಟರ್ ಎಂ. ಸುಬ್ರಮಣಿಯನ್‌ರವರು ೧ ಲಕ್ಷ ರೂ. ವೆಚ್ಚದಲ್ಲಿ ಕಟ್ಟಿಸಿರುವ ಎಂ. ಎ. ಎಂ. ಮುತ್ತು ರಾಮನ್ ಚೆಟ್ಟಿಯಾರ್ ಸ್ಮಾರಕ ಸಭಾಭವನದ ಉದ್ಘಾಟನೆ ಮಾ. ೧೧ ರಂದು ನಡೆಯಿತು.

ಕೊಪ್ಪ ತಾ|| ಅ|| ಮಂ|| ಅಧ್ಯಕ್ಷ ಪಿ. ಜಿ. ಚಿದಂಬರ್ ಅಧ್ಯಕ್ಷತೆ ವಹಿಸಿದ್ದರು. ಡಾ. ಎಸ್. ಆರ್. ಶೆಟ್ಟರು ಚೆಟ್ಟಿಯಾರರ ಜೀವನ ಪರಿಚಯವನ್ನು ಮಾಡಿಕೊಟ್ಟರು. ಪಿ. ಜಿ. ಗುರ್ಜರ್‌ರವರು ಸಭಾಭವನವನ್ನು ಉದ್ಘಾಟಿಸಿದರು.

ಸುಬ್ರಮಣಿಯನ್‌ರವರ ಪರವಾಗಿ ಭವನವನ್ನು ಜ. ಎ. ಸೊಸೈಟಿಗೆ ವಹಿಸಿಕೊಟ್ಟ ಎಸ್ಟೇಟ್ ಮ್ಯಾನೇಜರ್ ಎ. ಅರುಣಾಚಲಂ ಅವರಿಗೆ ಗಣಪತಿ ವಿಗ್ರಹ ನೀಡಿ ಗೌರವಿಸಲಾಯಿತು.

ಕಾಫಿ ಸಂಶೋಧನ ಕೇಂದ್ರದ ನಿರ್ದೇಶಕ ಡಾ. ಎಸ್. ವಿಶ್ವೇಶ್ವರ್ ಮುಖ್ಯ ಅತಿಥಿಗಳಾಗಿದ್ದರು.

ವಿದ್ಯಾಸಂಸ್ಥೆಯ ಅಧ್ಯಕ್ಷ ಜಿ. ಸಬ್ಬರಾವ್ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಎನ್. ವಿ. ಅನಂದರಾಮ ಭಟ್ಟರು ಅತಿಥಿಗಳಿಗೆ ಮಾಲಾರ್ಪಣೆ ಮಾಡಿ ವಂದಿಸಿದರು.

ನಾರ್ವೆಯಲ್ಲಿ ಪೂರ್ವ ಪ್ರಾಥಮಿಕ ತರಗತಿ ಪ್ರಾರಂಭ

ನಾರ್ವೆ: ಇಲ್ಲಿನ ಸರ್ಕಾರಿ ಮಾ. ಹಿ. ಪ್ರಾ. ಶಾಲೆಯ ಆವರಣದಲ್ಲಿ ಪೂರ್ವ ಪ್ರಾಥಮಿಕ ತರಗತಿಯ ಪ್ರಾರಂಭೋತ್ಸವ ಮಾ. ೧೧ ರಂದು ನೆರವೇರಿತು. ನರಸೀಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷ ಕೆ. ಎಸ್. ಕಾಡಪ್ಪ ನವರು ಜ್ಯೋತಿ ಬೆಳಗಿಸಿ, ಸಿಹಿ ಹಂಚುವುದರ ಮೂಲಕ ಪ್ರಾರಂಭೋತ್ಸವ ನೆರವೇರಿಸಿದರು.

ಹಿರಿಯ ಶಿಕ್ಷಕರಾದ ಬಸವರಾಜ ಆರಾಧ್ಯರ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ನರಸೀಪುರ ಪಂಚಾಯ್ತಿ ಗ್ರಾಮಲೆಕ್ಕಿಗ ವಿ. ಎನ್. ರಾಮಣ್ಣ ಮಾತನಾಡಿ ಪೂರ್ವ ಪ್ರಾಥಮಿಕ ಶಾಲೆಯ ಮೂಲಕ ಚಿಕ್ಕ ವಯಸ್ಸಿನಲ್ಲೇ ಮಕ್ಕಳಲ್ಲಿ ವಿದ್ಯೆಯ ಒಲವು ಮೂಡಿಸಲು ಕರೆಕೊಟ್ಟರು.

ಶಾಲೆಯ ಮುಖ್ಯೋಪಾಧ್ಯಾಯ ಕೆ. ಶ್ರೀನಿವಾಸ ಮೂರ್ತಿ ಸ್ವಾಗತಿಸಿದರು. ಕು. ಶ್ರೀಗೌರಿ ವಂದಿಸಿದರು. ಶಾಲೆಯ ಎಲ್ಲಾ ಶಿಕ್ಷಕರೂ ಮಕ್ಕಳೂ ಸಮಾರಂಭದಲ್ಲಿ ಭಾಗವಹಿಸಿದ್ದರು.

ದೇವಂಗಿಯಲ್ಲಿ ಗಾಯನ, ನಾಟಕ ಸ್ಪರ್ಧೆ

ದೇವಂಗಿ: ಇಲ್ಲಿನ 'ಸಹ್ಯಾದ್ರಿ ಸಂಗಮ'ದ ಆಶ್ರಯದಲ್ಲಿ ಏಪ್ರಿಲ್‌ನಲ್ಲಿ ರಾಜ್ಯಮಟ್ಟದ ೨ ನೇ ಭಾವಗೀತೆ, ಜನಪದಗೀತೆ, ಚಿತ್ರಗೀತೆಗಳ ಗಾಯನ ಸ್ಪರ್ಧೆ ಮತ್ತು ಶಿವಮೊಗ್ಗ, ಚಿಕ್ಕಮಗಳೂರು' ಹಾಸನ, ದ-ಕನ್ನಡ ಜಿಲ್ಲೆಗಳ ಮಟ್ಟದ ೩ ನೇ ನಾಟಕ ಸ್ಪರ್ಧೆ ನಡೆಯಲಿದೆ.

ನಾಟಕ ಸ್ಪರ್ಧೆಗೆ ೧೫ ರೂ ಮತ್ತು ಗಾಯನ ಪ್ರತಿ ವಿಭಾಗಕ್ಕೆ ೧ ರೂ. ಇದ್ದು, ಪ್ರವೇಶಪತ್ರಗಳನ್ನು ಕವಿರಾಜ್, ಸಹ್ಯಾದ್ರಿ ಸಂಗಮ, ದೇವಂಗಿ, ತೀರ್ಥಹಳ್ಳಿ ತಾ|| ಇವರಿಗೆ ಕಳಿಸಲು ಕೋರಲಾಗಿದೆ. ಉಚಿತ ಊಟ, ವಸತಿ ಸೌಲಭ್ಯ ಇರುತ್ತದೆ.

ಫ್ಲಾಷ್ ಅಸೋಸಿಯೇಶನ್

ಶೃಂಗೇರಿ: ಇಲ್ಲಿನ ಫ್ಲಾಷ್ ಅಸೋಸಿಯೇಶನ್ ಆಶ್ರಯದಲ್ಲಿ ಮೇ ತಿಂಗಳಲ್ಲಿ ಜಿಲ್ಲಾಮಟ್ಟದ ನಾಟಕಸ್ಪರ್ಧೆ ಏರ್ಪಡಿಸಲಾಗುವುದೆಂದು ಕಾರ್ಯದರ್ಶಿ ಎಂ. ಆರ್. ಜಯೇಶ್ ತಿಳಿಸಿದ್ದಾರೆ.

ಹಾಸನ ರೈತ ನಾಯಕರು ಗಡೀಪಾರಾದರೆ ಮೈಸೂರು ಜಿಲ್ಲೆಗೆ ಸ್ವಾಗತ

ಹಾಸನ: ಸಹಕಾರ ಸಂಘಗಳ ಸಾಲ ವಸೂಲಿಗಾಗಿ ಅಧಿಕಾರಿಗಳು ರೈತರ ದಿನಬಳಕೆ ವಸ್ತುಗಳನ್ನು ಜಪ್ತಿ ಮತ್ತು ಹರಾಜು ಮಾಡುವುದನ್ನು ವಿರೋಧಿಸುವ ಮತ್ತು ಜಪ್ತಿಯಾದ ವಸ್ತುಗಳನ್ನು ರೈತರು ಮರುಜಪ್ತಿ ಮಾಡಿ ವಾಪಸ್ ಪಡೆಯುವ ತೀವ್ರ ಹೋರಾಟ ಹಾಸನ ಜಿಲ್ಲೆಯಾದ್ಯಂತ ರೈತಸಂಘದ ನಾಯಕತ್ವದಲ್ಲಿ ನಡೆಯುತ್ತಿದೆ, ಇದರಿಂದ ವ್ಯಕ್ತಿಗಳಿಗೆ ಮತ್ತು ಆಸ್ತಿಪಾಸ್ತಿಗಳಿಗೆ ಭಾರಿ ಅಪಾಯ ಹಾನಿ ಉಂಟಾಗುತ್ತದೆಂಬ ಕಾರಣ ನೀಡಿ, ೫ ಜನ ಪ್ರಮುಖ ನಾಯಕರಿಗೆ ಗಡೀಪಾರು ನೋಟೀಸನ್ನು ಜಿಲ್ಲಾಧಿಕಾರಿಗಳು ನೀಡಿರುವುದಾಗಿ ವರದಿಯಾಗಿದೆ.

ಗಡೀಪಾರಾದರೆ ಅವರನ್ನು ಮೈಸೂರು ಜಿಲ್ಲೆಯ ರೈತರು ಅಭಿಮಾನದಿಂದ ಸ್ವಾಗತಿಸುವುದಾಗಿ ಪಿರಿಯಾಪಟ್ಟಣ ತಾ|ರೈತ ಸಂಘದ ಕಾರ್ಯದರ್ಶಿ ಜೋಗನಹಳ್ಳಿ ಗುರುಮೂರ್ತಿ ಘೋಷಿಸಿದ್ದಾರೆ.

ಸಿದ್ಧರ ಮಠ ಜಾತ್ರೆ ಯುವಕ ಸಂಘದ ವಾರ್ಷಿಕೋತ್ಸವ

ಸಿದ್ಧರ ಮಠ: ಮಾ. ೯ರಂದು ಇಲ್ಲಿನ ಶ್ರೀ ಸಿದ್ಧೇಶ್ವರ ಜಾತ್ರೆ ಸಂಭ್ರಮದಿಂದ ನೆರವೇರಿತು. ಅದೇ ದಿನ ಸಂಜೆ ಸ್ಥಳೀಯ ಸಿದ್ಧೇಶ್ವರ ಯುವಕ ಸಂಘದ ವಾರ್ಷಿಕೋತ್ಸವ ಪಿ. ಜಿ. ಚಿದಂಬರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಮಾರಂಭದ ಕೊನೆಯಲ್ಲಿ ಸಂಘದ ಸದಸ್ಯರಿಂದ ಮನರಂಜನೆ ಕಾರ್ಯಕ್ರಮ ಮತ್ತು ನಾಟಕ ಪ್ರದರ್ಶನವಿತ್ತು.

ಹಳೆಯ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವ

ಕಿಗ್ಗ: ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ಫೆ. ೨೭ ರಂದು ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ. ವೇದವ್ಯಾಸಾಚಾರ್ ರವರ ಅಧ್ಯಕ್ಷತೆಯಲ್ಲಿ ನಡೆದು, ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ವಿ. ರಾಮಭಟ್ಟರನ್ನು ಸನ್ಮಾನಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯ ಎಂ. ಆರ್. ಚಿನ್ನಪ್ಪನವರು ಉದ್ಘಾಟಿಸಿದ ಸಮಾರಂಭದಲ್ಲಿ ತಾ. ಅ. ಮಂ. ಅಧ್ಯಕ್ಷ ಡಿ. ಕಳಸಪ್ಪ ಹೆಗ್ಡೆ ಮುಖ್ಯ ಅತಿಥಿಗಳಾಗಿದ್ದರು. ಮನರಂಜನೆ ಮತ್ತು ನಾಟಕ ಪ್ರದರ್ಶನಗಳು ನಡೆದವು.

ಫೆ. ೨೭ ರಂದು ಶಾಲಾ ವಾರ್ಷಿಕೋತ್ಸವ ಸ. ವಿದ್ಯಾಧಿಕಾರಿ ಟಿ. ಭೀಮಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯ ಅತಿಥಿಗಳಾಗಿದ್ದ ವಲಯ ಅರಣ್ಯಾಧಿಕಾರಿಗಳು ಹೊಸದಾಗಿ ಕಟ್ಟುತ್ತಿರುವ ಕೊಠಡಿಗೆ ೧೦೧ ರೂ ದಾನ ಮಾಡಿದರು. ಮಕ್ಕಳಿಂದ ಮನರಂಜನೆ ಕಾರ್ಯಕ್ರಮ ನಡೆಯಿತು.

ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಹೆಂಡತಿಯ ಕೊಲೆಗೆ ಯತ್ನ

ಕೊಪ್ಪ: ಇಲ್ಲಿಗೆ ಸಮೀಪದ ಭಂಡಾರ ಎಸ್ಟೇಟ್‌ನಲ್ಲಿ ಕೆಲಸ ಮಾಡುತ್ತಿದ್ದವನೊಬ್ಬ ತನ್ನ ಹೆಂಡತಿಯ ಮೈಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಲು ಯತ್ನಿಸಿದ ಘಟನೆ ಈಚೆಗೆ ನಡೆದಿದೆ.

ತೀವ್ರ ಸುಟ್ಟಗಾಯಗಳಾದ ಹೆಂಡತಿ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ತಮಿಳುನಾಡಿನವನಾದ ಆರೋಪಿ ತಲೆತಪ್ಪಿಸಿಕೊಂಡಿದ್ದು, ಮೊಕದ್ದಮೆ ದಾಖಲು ಮಾಡಿ ಕೊಂಡಿರುವ ಕೊಪ್ಪ ಪೋಲಿಸರು ಅವನ ಪತ್ತೆಗಾಗಿ ಅವನ ಊರಿಗೆ ಸಿಬ್ಬಂದಿಯನ್ನು ಕಳಿಸಿದ್ದಾರೆಂದು ತಿಳಿದು ಬಂದಿದೆ.

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ: ಸಿರಿಮನೆ ನಾಗರಾಜ್. ಅಚ್ಚು: ನೇಸರ ಮುದ್ರಣ, ಕೊಪ್ಪ.